ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–1**

ಸಂಖ್ಯೆ:–ಎಡಿಎಂ2(1)ಶಿ.ರಾ.ಪ್ರ–01/2019–20. ದಿನಾಂಕ:12–06–2019.

**–:ಸುತ್ತೋಲೆ:–**

ವಿಷಯ:–2018 ನೇ ಸಾಲಿನ **"ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಯ ಆಯ್ಕೆ ಪ್ರಕ್ರಿಯೆಯನ್ನು ಆನ್ ಲೈನ್ ಮೂಲಕ ನಿರ್ವಹಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ:14.05.2019.
2. ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರ ಅಂತರ್ಜಾಲ ತಾಣದಲ್ಲಿನ ಸೂಚನೆಯಂತೆ.

*******

2018 ನೇ ಸಾಲಿನ **"ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಗೆ,

1. ರಾಜ್ಯ ಸರ್ಕಾರದ ಶಾಲೆಗಳು, ಅನುದಾನಿತ ಶಾಲೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿರುವ ಶಾಲೆಗಳಲ್ಲಿನ ಖಾಯಂಗೊಂಡ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು.
2. ಕೇಂದ್ರ ಸರ್ಕಾರದ ಮತ್ತು ಸಿ.ಬಿ.ಎಸ್.ಇ ಮತ್ತು ಸಿ.ಐ.ಎಸ್.ಸಿ.ಇ ಮಾನ್ಯತೆ ಪಡೆದ ಶಾಲೆಗಳ ಖಾಯಂಗೊಂಡ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು.

ಆಯ್ಕೆಯಾಗಬಯಸಿ, ದಿನಾಂಕ:06–05–2019 ರಿಂದ 15–06–2019 ರವರೆಗೆ ಆನ್ ಲೈನ್ ಮೂಲಕ (http://www.nationalawardtoteachers.com ಅಂತರ್ಜಾಲ ತಾಣದ ಮೂಲಕ) ಅರ್ಜಿ ಸಲ್ಲಿಸಬಹುದಾಗಿದ್ದು, ಇದಕ್ಕಾಗಿ ಅನುಸರಿಸಬೇಕಾದ ಕಾರ್ಯ ವಿಧಾನದ ಕುರಿತು ಉಲ್ಲೇಖ–01 ರ ಪತ್ರದಲ್ಲಿ ತಿಳಿಸಲಾಗಿದೆ.

ಅದರಂತೆ ನಿಗದಿತ ಅವಧಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ (ಡಿಎಸ್‌ಸಿ)ಯು **ದಿನಾಂಕ: 16–06–2019 ರಿಂದ 07–07–2019 ರೊಳಗೆ** ಈ ಪತ್ರದೊಂದಿಗೆ ಲಗತ್ತಿಸಲಾಗಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರು ಉಲ್ಲೇಖ–02 ರಂತೆ ಹೊರಡಿಸಿರುವ ಮಾರ್ಗಸೂಚಿಯನ್ವಯ ಮೊದಲ ಹಂತದ ಪರಿಶೀಲನೆ ನಡೆಸಿ, ಅಂಕಗಳನ್ನು ನೀಡಿ ರಾಜ್ಯ ಆಯ್ಕೆ ಸಮಿತಿಗೆ ಸಲ್ಲಿಸತಕ್ಕದ್ದು.

**ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ವಿವರ.**

1. **ಉಪನಿರ್ದೇಶಕರು(ಆಡಳಿತ). : ಅಧ್ಯಕ್ಷರು**
2. **ಉಪನಿರ್ದೇಶಕರು(ಅಭಿವೃದ್ಧಿ)/ ಪ್ರಾಂಶುಪಾಲರು, ಡಯಟ್. : ಸದಸ್ಯರು**
3. **ಜಿಲ್ಲಾಧಿಕಾರಿಗಳಿಂದ ನಾಮನಿರ್ದೇಶನಗೊಂಡ ಒಬ್ಬ ಪ್ರತಿಷ್ಠಿತ ಶಿಕ್ಷಣ ತಜ್ಞರು. : ಸದಸ್ಯರು**

ವಿ.ಸೂ:- ಉಪನಿರ್ದೇಶಕರು(ಆಡಳಿತ) ರವರು ತಮಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಿ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ (ಡಿಎಸ್‌ಸಿ) ಗೆ ಜಿಲ್ಲೆಯ ಒಬ್ಬ ಪ್ರತಿಷ್ಠಿತ ಶಿಕ್ಷಣ ತಜ್ಞರನ್ನು ನಾಮನಿರ್ದೇಶನ ಮಾಡಲು ಕ್ರಮವಹಿಸುವುದು.

ಜಿಲ್ಲಾ ಆಯ್ಕೆ ಸಮಿತಿಯ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪ್ರತ್ಯೇಕವಾಗಿ ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರ ಇಲಾಖಾ ಸಂಚಾರಿ ದೂರವಾಣಿ (ಮೊಬೈಲ್) ಗೆ ಕಳುಹಿಸಲಾಗುವುದು

. ಅವುಗಳನ್ನು ಬಳಸಿಕೊಂಡು http://nationalawardstoteachers.com/nat2018 ಅಂತರ್ಜಾಲ ತಾಣದ ಮೂಲಕ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲ ತಾಣ **http://www.schooleducation.kar.nic.in** ದಲ್ಲಿನ ಮೇಲ್ಕಂಡ ವೆಬ್ ತಾಣದ ಕೊಂಡಿಯ ಮೂಲಕ ಜಿಲ್ಲಾ ಆಯ್ಕೆ ಸಮಿತಿಯು ಲಾಗಿನ್ ಆಗಿ ಸ್ವೀಕೃತವಾಗಿರುವ ಅರ್ಜಿಗಳನ್ನು /ಪ್ರಸ್ತಾವನೆಗಳನ್ನು ಪರಿಶಿಲಿಸಬೇಕಾಗುತ್ತದೆ.

- ➢ **ಜಿಲ್ಲಾ ಆಯ್ಕೆ ಸಮಿತಿ (ಡಿಎಸ್‌ಸಿ) ಯ ಮುಖ್ಯ ಕರ್ತವ್ಯಗಳು :**

ಅ)ಅರ್ಜಿದಾರರು ನೀಡಿರುವ ಮಾಹಿತಿಯ ಮತ್ತು ದಾಖಲೆಗಳ ಸತ್ಯಾಸತ್ಯತೆಯನ್ನು ಅರಿಯಲು ಪರಿಶೀಲನಾ ತಂಡಗಳ ಮೂಲಕ ಅವುಗಳ ಭೌತಿಕ ಪರಿಶೀಲನೆಯನ್ನು ಜಿಲ್ಲಾ ಆಯ್ಕೆ ಸಮಿತಿಯು ನಡೆಸತಕ್ಕದ್ದು.

ಆ) ಈ ಪತ್ರದೊಂದಿಗೆ ಲಗತ್ತಿಸಲಾದ ಮಾರ್ಗಸೂಚಿಯಲ್ಲಿನ Annexure-1 ರಂತೆ ಅರ್ಜಿದಾರರ ಮೌಲ್ಯಮಾಪನವನ್ನು ಮಾಡಿ ಅಂಕಗಳನ್ನು ನೀಡುವುದು.

ಇ)**ಜಿಲ್ಲಾ ಆಯ್ಕೆ ಸಮಿತಿಯ ಪ್ರಮಾಣ ಪತ್ರ** : ಜಿಲ್ಲಾ ಆಯ್ಕೆ ಸಮಿತಿಯು ಅರ್ಜಿದಾರರು ನೀಡಿರುವ ಮಾಹಿತಿ

ಮತ್ತು ದಾಖಲೆಗಳಲ್ಲಿನ ಸತ್ಯಾಂಶವನ್ನು ಕೂಲಂಕಶವಾಗಿ ಪರಿಶೀಲಿಸಿದ ನಂತರವೇ ಅಂಕಗಳನ್ನು ನೀಡತಕ್ಕದ್ದು.

ಈ) ಇಂತಹ ಅರ್ಜಿಗಳನ್ನು / ಪ್ರಸ್ತಾವನೆಗಳನ್ನು ವಿಸ್ತೃತವಾಗಿ ಪರಿಶೀಲಿಸಿದ ನಂತರ ಅವುಗಳ ಪೈಕಿ ಮೂರು ಅತ್ಯುತ್ತಮ ಪ್ರಸ್ತಾವನೆಗಳನ್ನು ಜಿಲ್ಲಾ ಆಯ್ಕೆ ಸಮಿತಿಯು ಅಂತಿಮಗೊಳಿಸತಕ್ಕದ್ದು. ಈ ಮೂರು ಪ್ರಸ್ತಾವನೆಗಳನ್ನು **"ವಿಚಕ್ಷಣಾ ದಳದ ನಿರಪೇಕ್ಷಣ ಪ್ರಮಾಣ ಪತ್ರ" (ಅರ್ಜಿದಾರರ(ಶಿಕ್ಷಕರ) ಸೇವೆ ತೃಪ್ತಿಕರವಾಗಿರುವ ಮತ್ತು ಅವರ ವಿರುದ್ಧ ಯಾವುದೇ ವ್ಯತಿರಿಕ್ತ ಷರಾ ಇಲ್ಲದಿರುವ ಬಗ್ಗೆ ಸಕ್ಷಮ ಪ್ರಾಧಿಕಾರ ನೀಡಿರುವ ಪ್ರಮಾಣಪತ್ರ)** ದೊಂದಿಗೆ ಆನ್ ಲೈನ್ ಮುಖಾಂತರ ರಾಜ್ಯ ಆಯ್ಕೆ ಸಮಿತಿಗೆ ಸಲ್ಲಿಸತಕ್ಕದ್ದು .

ಉ) ಜಿಲ್ಲಾ ಆಯ್ಕೆ ಸಮಿತಿಗೆ ಸ್ವೀಕೃತವಾಗಿರುವ ಅರ್ಜಿಗಳ ಜೊತೆಗೆ ಅರ್ಜಿ ಸಲ್ಲಿಸದಿರುವ ಅತ್ಯುತ್ತಮ ಶಿಕ್ಷಕರ / ಮುಖ್ಯಶಿಕ್ಷಕರ/ ವಿಶೇಷ ಶಿಕ್ಷಕರ / ವಿಭಿನ್ನ ಸಾಮರ್ಥ್ಯವುಳ್ಳ ಶಿಕ್ಷಕರ ಪ್ರಕರಣಗಳಲ್ಲಿ ಗರಿಷ್ಠ ಒಂದು ಪ್ರಸ್ತಾವನೆಯನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ಮಾರ್ಗಸೂಚಿಯಲ್ಲಿನ Annexure-1 ರಂತೆ ಮೌಲ್ಯಮಾಪನವನ್ನು ಮಾಡಿ ಅಂಕಗಳನ್ನು ನೀಡಿ ರಾಜ್ಯ ಆಯ್ಕೆ ಸಮಿತಿಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಊ) ಜಿಲ್ಲಾ ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಸಿರುವ ಶಿಕ್ಷಕರ ವಿಜ್ಞಾನ, ಕಲಾ, ಸಂಗೀತ ಹಾಗೂ ದೈಹಿಕ ಶಿಕ್ಷಣ ಮತ್ತು ವಿಭಿನ್ನ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಪರಿಗಣಿಸಬಹುದಾಗಿದೆ.

ಋ) ಜಿಲ್ಲಾ ಆಯ್ಕೆ ಸಮಿತಿ(ಡಿಎಸ್‌ಸಿ) ಯು ಆಯ್ಕೆ ಪ್ರಕ್ರಿಯೆಗೆ ಅನುಸರಿರಬೇಕಾದ ಕಾರ್ಯ ವಿಧಾನ ಮತ್ತು ಮಾನದಂಡಗಳ ಕುರಿತಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ, ನವದೆಹಲಿ (MHRD) ಇವರು ಅಂತರ್ಜಾಲ ತಾಣ (http://www.nationalawardtoteachers.com) ದಲ್ಲಿ ಪ್ರಕಟಿಸಿರುವ ಮಾರ್ಗಸೂಚಿಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಅದರಲ್ಲಿನ ಅಂಶಗಳನ್ನು ಎಲ್ಲಾ **ಜಿಲ್ಲಾ ಮಟ್ಟದ ಆಯ್ಕೆ ಸಮಿತಿ** (ಡಿಎಸ್‌ಸಿ) ಗಳು ತಪ್ಪದೇ ಪಾಲಿಸುವುದು. **"ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಯ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ಸದರಿ ಅಂತರ್ಜಾಲ ತಾಣವನ್ನು ಜಿಲ್ಲಾ ಆಯ್ಕೆ ಸಮಿತಿ (ಡಿಎಸ್‌ಸಿ)ಗಳು ಸಂಪರ್ಕಿಸುವುದು.

(ಎಂ.ಪಿ.ಮಾದೇಗೌಡ)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)(ಹೆ.ಪ್ರ)

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ವಂದನಾಪೂರ್ವಕವಾಗಿ ಕಳುಹಿಸುತ್ತಾ ಜಿಲ್ಲಾ ಆಯ್ಕೆ ಸಮಿತಿ(ಡಿಎಸ್‌ಸಿ) ಗೆ ಜಿಲ್ಲೆಯಲ್ಲಿನ ಓರ್ವ ಪ್ರತಿಷ್ಠಿತ ಶಿಕ್ಷಣ ತಜ್ಞರನ್ನು ಜರೂರಾಗಿ ನೇಮಕ ಮಾಡಲು ಕೋರಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) & (ಅಭಿವೃದ್ಧಿ) , ಸಾ.ಶಿ.ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಇಲಾಖಾ ಅಂತರ್ಜಾಲ ತಾಣದಲ್ಲಿ ಮೇಲ್ಕಂಡಂತೆ ಕೊಂಡಿಯನ್ನು(ಲಿಂಕ್) ಜೋಡಿಸಲು ಮತ್ತು ಮುಖ ಪುಟದಲ್ಲಿ ದಿನಾಂಕ:07.07.2019 ರವರೆಗೆ ಕಾಣುವಂತೆ ಅಳವಡಿಸಲು ಈ ಕಛೇರಿಯ ಇ-ಆಡಳಿತ ಘಟಕಕ್ಕೆ.
4. ಹಿರಿಯ ಸಹಾಯಕ ನಿರ್ದೇಶಕರು(ಸಾರ್ವಜನಿಕ ಸಂಪರ್ಕ ಮತ್ತು ಶಿಕ್ಷಣ ವಾರ್ತೆ) ಇವರಿಗೆ ಶಿಕ್ಷಣ ವಾರ್ತೆಯಲ್ಲಿ ಪ್ರಕಟಿಸಲು.

ಪ್ರತಿಯನ್ನು ಮಾಹಿತಿಗಾಗಿ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಯರವರಿಗೆ ಸಲ್ಲಿಸುತ್ತಾ ಆಯುಕ್ತರ ಆದ್ಯ ಗಮನಕ್ಕೆ ತರಲು ಕೋರಿದೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ. ಇವರುಗಳಿಗೆ.
4. ನಿರ್ದೇಶಕರು, (ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು (ಡಿ.ಎಸ್.ಇ.ಆರ್.ಟಿ), ಬನಸಂಕರಿ ರಿಂಗ್ ರಸ್ತೆ, ಬೆಂಗಳೂರು.
6. ಸಹ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ.ಜಿ ರಸೆ, ಬೆಂಗಳೂರು.
7. ಕಛೇರಿ ಪ್ರತಿ.